# ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/226/ಇಎಸ್‌ಟಿ(7)2011 / 2551

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 07/10/2013.

## ಜ್ಞಾಪನ

ವಿಷಯ: ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ವಿಲೇವಾರಿ ಮಾಡಲು ನೋಡಲ್ ಅಧಿಕಾರಿಗಳನ್ನು ನೇಮಿಸುವ ಹಾಗೂ ಕಾನೂನು ಘಟಕದ ಕಾರ್ಯಗಳನ್ನು ಮರುವಿಂಗಡಣೆ ಮಾಡುವ ಬಗ್ಗೆ.

-*-

ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಬಗ್ಗೆ ಶ್ರೀ ಆರ್.ಕೆಂಡಯ್ಯ, ಸಹಾಯಕ ಆಡಳಿತಾಧಿಕಾರಿ(2) ಇವರನ್ನು ನೋಡಲ್ ಅಧಿಕಾರಿಯಾಗಿ ಈ ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಿ ಆದೇಶಿಸಲಾಗಿದೆ. ಸದರಿ ಅಧಿಕಾರಿಗಳು ಈ ಕೆಳಕಂಡ ಕಾರ್ಯಗಳ ಮೇಲ್ವಿಚಾರಣೆ ಮಾಡಲು ಮತ್ತು ಅವಶ್ಯಕತೆ ಇದ್ದಾಗ ನ್ಯಾಯಾಲಯಗಳಿಗೆ ಹಾಜರಾಗಲು ಸೂಚಿಸಲಾಗಿದೆ.

1. ನ್ಯಾಯಾಲಯದಲ್ಲಿ ಪ್ರಕರಣಗಳ ದಾಖಲಾತಿಯ ದಾವೆಯ ಪ್ರತಿ ನಿರ್ದೇಶನಾಲಯಕ್ಕೆ ಬಂದ ಕೂಡಲೇ ಸಂಬಂಧಪಟ್ಟ ಕಾರ್ಯನಿರ್ವಾಹಕರು, ಅನುದಾನಿತ ಇಂಜಿನಿಯರಿಂಗ್ ಕಾಲೇಜು ಮತ್ತು ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳಿಂದ ಮಾಹಿತಿ ಪಡೆದು ನ್ಯಾಯಾಲಯಕ್ಕೆ 1 ವಾರದೊಳಗೆ ಕಂಡಿಕೆವಾರು ಉತ್ತರಗಳನ್ನು ಸಿದ್ಧಪಡಿಸಿ ಸಲ್ಲಿಸತಕ್ಕದ್ದು.
2. ಆ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಂಡಿಕೆವಾರು ಉತ್ತರದ ಆಧಾರದ ಮೇಲೆ ಸರ್ಕಾರಿ ವಕೀಲರು ನ್ಯಾಯಾಲಯಕ್ಕೆ ಆಕ್ಷೇಪಣಾ ಹೇಳಿಕೆಯನ್ನು ಸಿದ್ಧಪಡಿಸಲು/ಪ್ರಮಾಣೀಕರಿಸಲು ಕ್ರಮ ಕೈಗೊಳ್ಳುವುದು.
3. ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣದ ಪ್ರತಿ ಬಂದ ಕೂಡಲೇ ಸರ್ಕಾರದಿಂದ ಸರ್ಕಾರಿ ವಕೀಲರನ್ನು ನೇಮಿಸಲು ಮತ್ತು ಇಲಾಖೆಯ ವ್ಯಾಜ್ಯ ನಿರ್ವಹಣಾ ಅಧಿಕಾರಿ (ಲಿಟಿಗೇಷನ್ ಕಂಡಕ್ಟಿಂಗ್ ಆಫೀರ್) ನ್ನು ನೇಮಿಸುವ ಬಗ್ಗೆ ಸರ್ಕಾರದ ಸೂಕ್ತ ಆದೇಶ ಪಡೆಯಲು ಕ್ರಮ ಕೈಗೊಳ್ಳತಕ್ಕದ್ದು.
4. ಪ್ರಕರಣಗಳ ವಿಚಾರಣಾ ದಿನಾಂಕವನ್ನು ಅಂತರ್ಜಾಲ ಮೂಲಕ ಅಥವಾ ನ್ಯಾಯಾಲಯದಿಂದ ಪಡೆದು ಸಂಬಂಧಪಟ್ಟ ಅಧಿಕಾರಿ ಮತ್ತು ಕಾರ್ಯನಿರ್ವಾಹಕರಿಗೆ ತುರ್ತು ಮತ್ತು ಪ್ರಮುಖವಾದ ಪ್ರಕರಣಗಳನ್ನು ನಿರ್ದೇಶಕರು ಮತ್ತು ಆಡಳಿತಾಧಿಕಾರಿಗಳ ಗಮನಕ್ಕೆ ತರುವುದು. ಇದಕ್ಕೆ ಸಂಬಂಧಿಸಿದಂತೆ ದಿನಚರಿ ಇಡುವುದು.
5. ನ್ಯಾಯಾಲಯದಿಂದ ತಾತ್ಕಾಲಿಕ ಆದೇಶ ತಡೆಯಾಜ್ಞೆ ಮತ್ತು ಅಂತಿಮ ಆದೇಶಗಳು ಬಂದ ತಕ್ಷಣ ಕಾಲಕಾಲಕ್ಕೆ ನಿರ್ದೇಶಕರು, ಆಡಳಿತಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕರ ಗಮನಕ್ಕೆ ತಂದು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು.
6. ನ್ಯಾಯಾಲಯದ ಆದೇಶಗಳ ಮೇಲೆ ಮೇಲ್ಮನವಿ ಸಲ್ಲಿಸಬೇಕೆಂದು ಇಲಾಖೆ ಅಥವಾ ಸರ್ಕಾರ ತೀರ್ಮಾನ ಕೈಗೊಂಡಲ್ಲಿ ಸರ್ಕಾರಿ ವಕೀಲರಿಂದ ಅಭಿಪ್ರಾಯ ಪಡೆದು ನಿರ್ದೇಶಕರ ಗಮನಕ್ಕೆ ತರುವುದು.

7. ಸರ್ಕಾರಕ್ಕೆ ಆರ್ಥಿಕವಾಗಿ ಹೊರೆಯಾಗುವಂತಹ ಪ್ರಕರಣಗಳು, ಸಾರ್ವಜನಿಕ ಹಿತಾಸಕ್ತಿ ಪ್ರಕರಣಗಳು, ನ್ಯಾಯಾಲಯ ನಿಂದನಾ ಅರ್ಜಿಗಳು ದಾಖಲಾದಲ್ಲಿ ಅದರ ಬಗ್ಗೆ ವಿಶೇಷ ನಿಗಾವಹಿಸಿ ನಿರ್ದೇಶಕರು ಮತ್ತು ಸರ್ಕಾರದ ಗಮನಕ್ಕೆ ತರತಕ್ಕದ್ದು.

   ಇನ್ನು ಮುಂದೆ ಕಾನೂನು ಘಟಕದ ಕಡತಗಳನ್ನು ಸಹಾಯಕ ಆಡಳಿತಾಧಿಕಾರಿ(2) ಇವರ ಮೂಲಕ ಕಳುಹಿಸತಕ್ಕದ್ದು.

ನ್ಯಾಯಾಲಯಗಳಿಗೆ ಸಂಬಂಧಿಸಿದ ಕೆಲಸಕಾರ್ಯಗಳಿಗೆ ಹೋಗಿಬರಲು ಮಾತ್ರ ವಾಹನ ಸಂಖ್ಯೆ ಕೆ.ಎ 13 ಜಿ 222 ನ್ನು ಬಳಸಿಕೊಳ್ಳಲು ನೋಡಲ್ ಅಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

**ಕರಡು ನಿರ್ದೇಶಕರಿಂದ ಅನುಮೋದಿಸಿದೆ**

ನಿರ್ದೇಶಕರು

**ಇವರಿಗೆ,**

1. ಶ್ರೀ ಆರ್.ಕೆಂಡಯ್ಯ, ಸಹಾಯಕ ಆಡಳಿತಾಧಿಕಾರಿ(2), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು

**ಪ್ರತಿ ಇವರಿಗೆ ಮಾಹಿತಿಗಾಗಿ**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ) ಬಹುಮಹಡಿ ಕಟ್ಟಡ, ಬೆಂಗಳೂರು
2. ಜಂಟಿ ನಿರ್ದೇಶಕರು, ಆಡಳಿತ/ಯೋಜನೆ/ಪರೀಕ್ಷೆ. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
3. ಆಡಳಿತಾಧಿಕಾರಿಗಳು
4. ಸಹಾಯಕ ಆಡಳಿತಾಧಿಕಾರಿ (1), (2), (3)
5. ಎಲ್ಲಾ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ/ಪಾಲಿಟೆಕ್ನಿಕ್‌ಗಳ/ಕಿರಿಯ ತಾಂತ್ರಿಕ ಶಾಲೆಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ತುರ್ತು ಕ್ರಮಕ್ಕಾಗಿ ಹಾಗೂ ಮಾರ್ಗದರ್ಶನ ಪಾಲಿಸಲು.
6. ಇ–ಆಡಳಿತ ಘಟಕಕ್ಕೆ
7. ನಿರ್ದೇಶನಾಲಯದ ವಿಷಯ ನಿರ್ವಾಹಕರು
   1. ಕಾನೂನು ಘಟಕ
   2. ಇಎಸ್‌ಟಿ(4)ಎ, ಇಎಸ್‌ಟಿ (4)ಬಿ ಮತ್ತು ಡಿಇಕ್ಯೂ
   3. ಪರೀಕ್ಷೆ
   4. ಲೆಕ್ಕಪತ್ರ